Reg No. B G 155 4-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯಚ್ಚು ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಷ್ಟ್ರೀಕರಣ ಫಲ – ಮೈಸೂರು ರಾಜ್ಯದಲ್ಲಿ ಹೆಚ್ಚು ಕೈಗಾರಿಕೆ ಸ್ಥಾಪನೆ

ಕೃಷ್ಣಾ ಮೇಲ್ದಂಡೆ ಪ್ರಾಜೆಕ್ಟ್

ಬಿಜಾಪುರ— ಕೃಷ್ಣಾ ಮೇಲ್ದಂಡೆ ಪ್ರಾಜೆಕ್ಟಿಗೆ ರೂ. 100 ಕೋಟಿ ಭಾರೀ ಖರ್ಚು ಬೀಳುವುದೆಂದು, ಬಿಡುವದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

● ನಾಳೆ ದೆಹಲಿಯಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷ ಸಭೆ ಸೇರುತ್ತದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೀಗನೇ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರ್ಟಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಜಪುರಂ, ಮೈಸೂರು 4.

10 ರೂಪಾಯಿ

ನವದೆಹಲಿ— ಲೋಕಸಭೆಯಲ್ಲಿ ರಾಜಧನ ರದ್ದಿಗಾಗಿ ಎಸ್ಪಿಪಿಯ ಶ್ರೀ ಕುಂದೂರವರು ಬಿರುಸಾಗಿ ಮಾತಾಡುತ್ತಿದ್ದಾಗ, ಸ್ವತಂತ್ರ ಪಕ್ಷದ ಶ್ರೀ ಪಿಲೂ ಮೋದಿಯವರು "10 ರೂಪಾಯಿಗಳನ್ನು ಬಿಸಾಡಲು ಕೂಡ ಯಾರಿಗೂ ಸುಲಭವಲ್ಲ" ಎಂದರು. ಇದನ್ನು ಕೇಳಿದ ಕಮ್ಯೂನಿಸ್ಟ್ ಮಾರ್ಕಿಸ್ಟ್ ಶ್ರೀ ಆನಂದ ನಂಬಿಯಾರರು ತಮ್ಮ ಜೇಬಿನಿಂದ 10 ರೂಪಾಯಿ ತೆಗೆದು ಅವರ ಟೇಬಲ್ ಮೇಲೆ ಎಸೆದರು. ಮೋದಿಯವರು ಹಣವನ್ನು ತೆಗೆದು ತಮ್ಮ ಪಾರ್ಟಿಯ ರಸೀತಿ ಕೊಟ್ಟರು. ನಂಬಿಯಾರರು ವಂದನಾಪೂರ್ವಕವಾಗಿ ರಸೀತಿಯನ್ನು ವಾಪಸ್ಸು ನೂಡಿದರು.

ಡಾ॥ ಧರ್ಮ ತೇಜರ ಇಚ್ಛೆ

ಬೊಂಬಾಯಿ— ಕೋಸ್ಟಾರಿಕಾದ ಸ್ಯಾನ್ ಜಾನ್‌ನಲ್ಲಿರುವ ಮಾಜಿ ಜಯಂತಿ ಹಡಗು ಕಂಪೆನಿಯ ಡಾ॥ ಧರ್ಮ ತೇಜರು ಕಂಪನಿಯಲ್ಲಿನ ತಮ್ಮ ರೂ. 2.12 ಕೋಟಿ ಷೇರುಗಳನ್ನು ಗಾಂಧೀ ಮೆಮೋರಿಯಲ್ ಟ್ರಸ್ಟಿಗೆ ಕೊಡುವ ಇಚ್ಛೆಯನ್ನು ಬ್ಲಿಟ್ಜ್ ಪತ್ರಿಕೆಗೆ ತಿಳಿಸಿದ್ದಾರೆ.

ರೂಮೇನಿಯಾದಲ್ಲಿ ನಿಕ್ಸನ್ನರು

ಬುಖರಾಸ್ಟ್— ಶಾಂತಿ ಕಾಲದಲ್ಲಿ ಕಮ್ಯುನಿಸ್ಟ್ ದೇಶಕ್ಕೆ ಭೇಟಿಕೊಟ್ಟ ಅಮೇರಿಕಾ ಅಧ್ಯಕ್ಷರು ನಿಕ್ಸನ್ನರು – ಪಾಕಿಸ್ತಾನದಿಂದ ರೂಮೇನಿಯಾಕ್ಕೆ ಬಂದ್ನಿ ಇವರು ಬಂದಾಗ ಅದ್ದೂರಿ ಸ್ವಾಗತ ದೊರೆಯಿತು – ಸಹಸ್ರಗಟ್ಟಲೆ ಜನರು ನೂಕುನುಗ್ಗಲಲ್ಲಿ ನಿಂತು ನೋಡಿದರು – ಎಲ್ಲ ದೇಶಗಳಲ್ಲೂ ಶಾಂತಿಯುತ ಸಹಬಾಳ್ವೆಗಾಗಿ ಪೂರ್ವ ಯೂರೋಪು ದೇಶಗಳು ಮಾಡಿದ ಯೋಜನೆಗೆ ಭವ್ಯವಾದ ಖಾತ್ರಿಯಾದ ನೆರವಿಗೆ ಅಮೇರಿಕಾ ಸಿದ್ದವೆಂದು ಹೇಳಿದರು.

● ರಾಷ್ಟ್ರಪತಿ ಚುನಾವಣೆಯಲ್ಲಿ ಶ್ರೀ ಸಿ. ಡಿ. ದೇಶಮುಖ್ ಮತ್ತು ಶ್ರೀ ವಿ ವಿ ಗಿರಿಯವರಿಗೆ ಪಿ ಎಸ್ ಪಿ ಬೆಂಬಲವಿದೆ

ವಿರೋಧ ಪ್ರದರ್ಶನ

ಪಾಲ್ಘಾಟು— ವಿದ್ಯಾಭ್ಯಾಸ ರೀತಿಯನ್ನು 'ಮುಸ್ಲಿಂ"ಮಾಡುವ ಮುಸ್ಲಿಂಲೀಗಿನ ಪ್ರಯತ್ನವನ್ನು ವಿರೋಧಿಸಿ ಮಲಬಾರಿನ ಚಳವಳಿಗಾರರು ಪ್ರದರ್ಶನ ನಡೆಸಿದರು.

ರಾಜ್ಯಸಭೆಗೆ ಆರ್ಜಿ

ನವದೆಹಲಿ— ಬಣ್ಣದ ಸೀಡೆ ತಯಾರಿಕೆಯನ್ನು ಕೈಮಗ್ಗದ ಭಾಗಕ್ಕೇ ರಿಜರ್ವ್ ಮಾಡುವ ಆಜ್ಞೆಯನ್ನು ಕೂಡಲೇ ಜಾರಿಗೆ ತರಬೇಕೆಂದು ತಮಿಳುನಾಡಿನ 4000 ಕೈಮಗ್ಗ ಕೆಲಸಗಾರರ ಪರವಾಗಿ ರಾಜ್ಯಸಭೆಗೆ ಆರ್ಜಿ ಕೊಡಲಾಯಿತು.

ವಿದ್ಯಾರ್ಥಿಗಳ ಆವಲು ಬದಲು

ತ್ರಿವೆಂದ್ರಂ— ರಾಷ್ಟ್ರಭಾವೈಕ್ಯಕ್ಕಾಗಿ ದಕ್ಷಿಣ ಮತ್ತು ಉತ್ತರ ರಾಜ್ಯಗಳ ವಿದ್ಯಾರ್ಥಿಗಳ ಆದಲುಬದಲು ಮಾಡುವ ಭಾರತ ಸರಕಾರದ ಕಾರ್ಯಕ್ರಮದಲ್ಲಿ, ಕೇರಳದ ಕೇಂದ್ರೀಯ ವಿದ್ಯಾಲಯದ 15 ವಿದ್ಯಾರ್ಥಿಗಳು ಉತ್ತರ ಪ್ರದೇಶದ ಘಾತೇಘರ್‌ನಲ್ಲಿಯ ಕೇಂದ್ರೀಯ ವಿದ್ಯಾಲಯದಲ್ಲಿ ಒಂದು ತಿಂಗಳು ಇರುವರು.

ನೆರೆಹಾವಳಿ

ಭೂಪಾಲ್— ಮಧ್ಯಪ್ರದೇಶದ ದಕ್ಷಿಣ ಮತ್ತು ಪೂರ್ವ ಜಿಲ್ಲೆಗಳಲ್ಲಿ ಹರಿಯುವ ನರ್ಮದ ಮತ್ತು ಇತರ ನದಿಗಳು ತುಂಬಾ ಪ್ರವಾಹದಲ್ಲಿವೆ— ನೆರೆಹಾವಳಿ ಪರಿಸ್ಥಿತಿ ಕೆಟ್ಟರೆ ಸಹಾಯಕ್ಕೆ ಸಿದ್ಧವಾಗಿರಲು ಸೈನ್ಯ— ಚೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಿಳಿಸಿದರು.

★ ಬೆಂಗಳೂರು— ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿಗೆ ನಿನ್ನೆ ತ್ರೈಸಾಕ್ಷಿಕಕಾರ್ಯಕ್ರಮ ಉದ್ಘಾಟನೆಯಾಯಿತು.

★ ಶ್ರೀಕಾಕುಲಂ ಜಿಲ್ಲೆಯ ಮಹೇಂದ್ರ ತನಾಯ ನದಿಯಲ್ಲಿ ದೋಣಿಯೊಂದು ಮುಳುಗಿ 5 ಮಹಿಳೆಯರು ಜಲಸಮಾಧಿ ಆದರು.

ನಾಲ್ಕನೇ ಅಧಿವೇಶನ

ಮೈಸೂರು— ಮೈಸೂರು ಜಿಲ್ಲಾ ಪತ್ರಿಕೋದ್ಯೋಗಿಗಳ ಸಮ್ಮೇಳನವು ನಿನ್ನೆ ಪುರಭವನದಲ್ಲಿ ನಡೆಯಿತು.

ದೇವಾಲಯ ಪ್ರವೇಶಕ್ಕೆ

ಕೊಲಂಬೊ— ಅಲ್ಪಸಂಖ್ಯಾತ ತಮಿಳರ (ಹರಿಜನ) ಸಂಸ್ಥೆಯ 5 ಮಂದಿ ಐತಿಹಾಸಿಕ ಮಾವಿಡ್ಡಪುರಂ ದೇವಾಲಯಕ್ಕೆ ಅಸ್ಪೃಶ್ಯರು ಪ್ರವೇಶಿಸಲು ಅವಕಾಶಕ್ಕಾಗಿ ಜಾಫ್ನಾ ಸರಕಾರಿ ಕ್ಲರಿಕಲ್ ಸರ್ವಿಸ್ ಅಸೋಸಿಯೇಷನ್ನಿನ ವರಾಂಡಾದಲ್ಲಿ ಅಮರಣಾಂತ ಉಪವಾಸ ಪ್ರಾರಂಭಿಸಿರುವರು.

ದೇವಾಲಯ ರಥ ಸುಟ್ಟುಹೋಯಿತು

ಚಂಗಲ್ಪಟ್— ಮುದುರಂಕಟಂನಲ್ಲಿನ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನದ 30 ಅಡಿ ಎತ್ತರದ ರಥವು ಪೂರ್ತಾ ಸುಟ್ಟುಹೋಯಿತು : ರಥದ ಹತ್ತಿರವಿದ್ದ ದನದ ಕೊಟ್ಟಿಗೆ ಮತ್ತು ಕಾಂಪೌಂಡಿನಲ್ಲಿದ್ದ ಜೋಪಡಿ ಸುಟ್ಟುಹೋಯಿತು – ಸುಮಾರು ರೂ. 1.5 ಲಕ್ಷ ನಷ್ಟವಾಗಿದೆ - ವಿನಾಶಕಾರಿ ಕೃತ್ಯ ಶಂಕಿಸಲಾಗಿದೆ – ಪೋಲೀಸು ತನಿಖೆ ನಡೆಯುತ್ತಿದೆ.

ಕೈಗಾರಿಕೆಗಳಿಗೆ ಅನುಕೂಲ

ಬೆಂಗಳೂರು— ಬ್ಯಾಂಕು ರಾಷ್ಟ್ರೀಕರಣವಾದದ್ದರಿಂದ ರಾಜ್ಯದಲ್ಲಿ ಸರಕಾರಿ ಕ್ಷೇತ್ರದಲ್ಲಿ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಲು ಹಣ ಒದಗಲು ಅನುಕೂಲವಾಗುವದೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಿಳಿಸಿದರು.

● ಕೊಹಿಮಾ— ಭಾರತ ರಕ್ಷಣಾ ಪಡೆಯ ಆರು ಮಂದಿ ಅಧಿಕಾರಿಗಳು ಮತ್ತು ಜನರನ್ನು ಕ್ರಿಕೆನೂವಲ್ಲಿ ನಾಗಾ ದೌರ್ಜನ್ಯರು ಗುಂಡಿಕ್ಕಿ ಕೊಂದರು.

○ ಬಂಗಾಳ ವಿಧಾನ ಸಭೆಯಲ್ಲಿ ಆದ ಗಲಭೆಯ ಸಂಬಂಧದಲ್ಲಿ ಐವರು ಪೋಲೀಸರ ಬಂಧನವಾಗಿದೆ.

ಮೈಸೂರು ಮಹಾರಾಜರು

ಮೈಸೂರು ಮಹಾರಾಜರು ಪೂರ್ವ ಆಫ್ರಿಕಾದಲ್ಲಿ ಎರಡು ವಾರಗಳ ಕಾಲ ಪ್ರವಾಸ ಮಾಡುವರು ಎಂದು ನೈರೋಬಿ ವಾರ್ತೆ ತಿಳಿಸುತ್ತದೆ ತಾಂಗನಿಯಾಕ್ಕೆ ಭೇಟಿಕೊಡುವ ನಿರೀಕ್ಷೆ ಇದೆ

ಪ್ರಕಾಶವೀರರ ಎಚ್ಚರಿಕೆ

ಮಾಜಿ ರಾಜರಿಗೆ ರಾಜಧನ ರದ್ದತಿ ಕುರಿತು ಶ್ರೀ ಪ್ರಕಾಶವೀರ ಶಾಸ್ತ್ರಿಯವರು ಲೋಕಸಭೆಯಲ್ಲಿ ಮಾತನಾಡುತ್ತಾ, ಒಪ್ಪಂದಗಳನ್ನು ರದ್ದುಪಡಿಸಿದರೆ ಜನರು ಕರೆನ್ಸಿ ನೋಟುಗಳಲ್ಲೂ ನಂಬಿಕೆ ಹೊಂದುವುದಿಲ್ಲ ಎಂದರು

ಎರಡನೆಯ ಶತಮಾನದ್ದು

ಹೈದರಾಬಾದಿನಿಂದ ಬಂದಿರುವ ವರದಿ ಪ್ರಕಾರ ವಿಜಯವಾಡಾದ ಒಂದು ಗುಹೆಯ ದೇವಾಲಯದಲ್ಲಿ ಬೌದ್ಧರ ಕಾಲದ ಅವಶೇಷಗಳು ದೊರೆತಿವೆ ಇದರಿಂದ ದೇವಾಲಯ ಕ್ರಿ ಪೂ 2ನೇ ಶತಮಾನದ್ದೆಂದು ಅಭಿಪ್ರಾಯಪಡಲಾಗಿದೆ 24 ಭಾರಿ ಕಂಬಗಳಿದ್ದು ಅಜಂತಾ ದೇವಾಲಯದಂತಿದೆ

ಜಯಪ್ರದ 2ನೇ ವಾರ

ವುಡ್‌ಲಾಂಡ್ ಸಿನಿ ಆಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ. ರಾಜೇಂದ್ರನಾಥ್, ಹೆಲ್ಕ

ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ — ಅಮೋಘ 4ನೇ ವಾರ

ಅಮೋಘ ಅಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ನಂ. ಪಿಹೆಚ್‌ಇ/ಡಿಬಿ/ಟಿಇಎಡಿ/
69/70/5256–95

ತಾ|| 26–7–69

III ಮತ್ತು ಮೇಲ್ಪಟ್ಟ ವರ್ಗದ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ಐಟಂ ದರದ ಆಧಾರದ ಮೇಲೆ ಈ ಕೆಳಗೆ ಕಂಡ ಕೆಲಸಗಳಿಗಾಗಿ 14–8–69ರ ಮಧ್ಯಾಹ್ನ 4 ಗಂಟೆ ವರಿಗೆ ಮೈಸೂರು–5, ಚಾಮರಾಜಪುರಂ ಅರಸ್ ಬೋರ್ಡಿಂಗ್ ಸ್ಕೂಲ್ ಕಾಂಪೌಂಡ್‌ನಲ್ಲಿರುವ, ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಅವರ ಕಾರ್ಯಾಲಯದಲ್ಲಿ ಕೆಲಸದ ಹೆಸರು ಬರೆದಿರುವ ಮೊಹರಾದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಸ್ವೀಕರಿಸುವರು. ಅದೇ ದಿನ ಮಧ್ಯಾಹ್ನ 4–15 ಗಂಟೆಗೆ ಟೆಂಡರ್‌ಗಳನ್ನು ಒಡೆಯಲಾಗುವುದು ಅಥವಾ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಅನುಕೂಲವಾದ ಮತ್ತಾವ ದಿನದಲ್ಲಾದರೂ ಒಡೆಯಲಾಗುವುದು.

ಕೊಳ್ಳೇಗಾಲ ಟೌನ್‌ನಲ್ಲಿ ನೀರು ಸರಬರಾಜು ಯೋಜನೆ

ಸೀ. ನಂ. 1

ಕೆಲಸದ ಹೆಸರು. ಕೊಳ್ಳೇಗಾಲದಲ್ಲಿ 13.64 ಲಕ್ಷ ಲೀಟರುಗಳಸಾಮರ್ಥ್ಯವುಳ್ಳ ನೆಲ ಮಟ್ಟದ ವೃತ್ತಾಕಾರದ ಆರ್ ಸಿ ಸಿ ಜಲಾಶಯದ ನಿರ್ಮಾಣ. V ಕಾಲ್.

ಅಂದಾಜು ಕೆಲಸದ ಭಾಗ (ಅಂದಾಜು) ರೂ. 58,950/–

ಅರ್ನೆಸ್ಟ್‌ಹಣ ಠೇವಣಿ ರೂ. 1,475/–

ಟೆಂಡರ್ ಡಾಕ್ಯು ಮೆಂಟ್ ಮೌಲ್ಯ ಒಂದು ಸೆಟ್‌ಗೆ ಪ್ಲಸ್ ಶೇಕಡ 3 ರಂತೆ ಮಾರಾಟ ತೆರಿಗೆ ಪ್ರತ್ಯೇಕ ರೂ. 10/–

ಮುಗಿಸಲು ಕಾಲಾವಧಿ. ಎಂಟು ತಿಂಗಳು

ಟೆಂಡರ್ ಷರತ್ತುಗಳ ವಿವರ, ವಿಧಾಯಕ ಫಾರಂಗಳ ಷೆಡ್ಯೂಲ್ ಇತ್ಯಾದಿಗಳನ್ನು ಮೈಸೂರಿನಲ್ಲಿರುವ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ವಿಭಾಗದಿಂದ 8–8–69 ರಿಂದ 13–8–69 ರ ವರಿಗೆ ಸೇರಿ ಪಡೆಯಬಹುದು. ಅಂಚೆಯ ಮೂಲಕ ವಿವರಗಳನ್ನು ಮತ್ತು ಫಾರಂಗಳನ್ನು ಅಪೇಕ್ಷಿಸುವ ಟೆಂಡರ್‌ದಾರರು ಟೆಂಡರ್ ಡಾಕ್ಯುಮೆಂಟ್‌ಗಳ ಮೌಲ್ಯ ದೊಡನೆ ಅಂಚೆ ಮತ್ತು ಇತರ ವೆಚ್ಚಗಳಿಗಾಗಿ ರೂ. 2/–(ಎರಡು ರೂ.)ನ್ನೂ ತ್ಯ ಕಳಿಸುವುದು ಮತ್ತು ಅಂಥಹಕೋರಿಕೆಗಳು ಈ ಕಚೇರಿಗೆ 8–8–69 ಕ್ಕಿಂತ ತಡವಾಗದಂತೆ ತಲುಪಬೇಕು. ಟೆಂಡರ್ ಫಾರಂಗಳನ್ನು ಪಡೆಯುವ ಮುನ್ನ ಟೆಂಡರ್

ಆರ್ಧ ಪೆನ್ನಿ ಸತ್ತಿತು

ಬ್ರಿಟನ್ನಿನಲ್ಲಿ 784 ವರ್ಷಗಳಿಂದ ಜೀವಿಸಿದ್ದ ಆರ್ಧ ಪೆನ್ನಿ ಮೊನ್ನೆ ಸತ್ತಿತು ಆ ನಾಣ್ಯ ಇನ್ನು ಅಚ್ಚಾಗುವುದಿಲ್ಲ

ಭಾರೀ ಮೈಕ್ರಾಸ್ಕೋಪ್

ನೂಸ್ಕೊ— ರಷ್ಯಾದಲ್ಲಿ ಹೊಸದಾಗಿ ನಿರ್ಮಿಸಿರು ಎಲೆಕ್ಟ್ರಾನಿಕ್ ಮೈಕ್ರಾಸ್ಕೋಪು ವಸ್ತುಗಳನ್ನು 4 ಮಿಲಿಯದಷ್ಟು ದೊಡ್ಡದಾಗಿ ಕಾಣಿಸುತ್ತದೆ.

ಮುಂದುವರಿದ ಸಭೆ

ಜುಲೈ ತಿಂಗಳ ಮುಂದುವರಿದ ಪುರ ಸಭಾಧಿವೇಶನ ಪುರಸ್ಭಾ ಭವನದಲ್ಲಿ ಈ ತಿಂಗಳು 6 ನೇ ತಾ|| ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುವುದು

ಆಗಮನ

ಗಡಿನಾಡು ಗಾಂಧಿ ಅಬ್ದುಲ್ ಗಫಾರ್ ಖಾ 28ರಂದು ದೆಹಲಿಗೆ ಬರಲಿರುವರು

ಹೆಚ್. ಇ. ಸರ್ಕಲ್‌ನಲ್ಲಿ ತಮ್ಮ ರಿಜಿಸ್ಟ್ರೇಷನ್ನಿನ ಅಧಿಕೃತ ಪ್ರತಿಯನ್ನು ಕೂಡ ಹಾಜರ್ಪಡಿಸಬೇಕು.

ಅರ್ನೆಸ್ಟ್ ಹಣ ಠೇವಣಿ ಇಲ್ಲದೆ ಬರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಮೈಸೂರಿನಲ್ಲಿರುವ ಪಿ. ಹೆಚ್. ಇ. ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಹೆಸರಿಗೆ ಆಡವಿಟ್ಟ ಖಜಾನೆ ಚಲನ್‌ಗಳು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಅಥವ ಯಾವುದೇ ಷೆಡ್ಯೂಲ್ ಬ್ಯಾಂಕ್‌ಗಳ ಮೇಲಿನ ಬ್ಯಾಂಕ್ ಡ್ರಾಫ್ಟ್‌ಗಳು ಅಥವ ರಾಷ್ಟ್ರೀಯ ಉಳಿತಾಯ ಅಥವ ರಕ್ಷಣಾ ಸರ್ಟಿಫಿಕೇಟ್‌ಗಳು ಈ ರೂಪದಲ್ಲಿ ಅರ್ನೆಸ್ಟ್ ಹಣ ಠೇವಣಿ ಇರತಕ್ಕದ್ದು. ಮೇಲೆ ಸೂಚಿಸಿರುವ ಯಾವುದೇ ರೂಪದಲ್ಲಿರುವ ಅರ್ನೆಸ್ಟ್ ಹಣ ಠೇವಣಿಯನ್ನು "ಇ ಎಂ ಡಿ ಮತ್ತು ಕೆಲಸದ ಹೆಸರುಗಳನ್ನು ತಿಳಿಸಿ" ಪ್ರತ್ಯೇಕ ಮೊಹರಾದ ಲಕೋಟೆಯಲ್ಲಿ ಇದನ್ನು ಬರೆದು ಟೆಂಡರ್‌ಗಳೊಡನೆ ಸಲ್ಲಿಸತಕ್ಕದ್ದು. ಬ್ಯಾಂಕ್ ಗ್ಯಾರಂಟಿ, ಚೆಕ್‌ಗಳು, ನಗದು ಇತ್ಯಾದಿಗಳನ್ನು ಇ ಎಂ ಡಿ ಗೆ ಒಪ್ಪಿಕೊಳ್ಳಲಾಗುವುದಿಲ್ಲ.

ಕೆಲಸವ ಎಲ್ಲಾ ದಿನಗಳಲ್ಲೂ ಕಚೇರಿ ವೇಳೆಯಲ್ಲಿ, ಮೈಸೂರಿನಲ್ಲಿರುವ, ಪಿ ಹೆಚ್ ಇಂಜಿನಿಯರಿಂಗ್ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಹೆಚ್ಚು ವಿವರಗಳನ್ನು ಪಡೆಯಬಹುದು.

ಹೇಗಾದರೂ ಯಾವುದೇ ಕಾರಣಗಳನ್ನು ಕೊಡದೆ ಯಾವುದೇ ಟೆಂಡರ್‌ಗಳನ್ನು ಒಪ್ಪುವ ಅಥವ ತಿರಸ್ಕರಿಸುವ ಹಕ್ಕು ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಕಾದಿರಿಸಲ್ಪಟ್ಟಿದೆ.

ಸಹಿ/– ಎಸ್. ಆರ್. ಸುಬ್ಬರಾವ್
ಎಕ್ಸಿಕ್ಯುಟೀವ್ ಇಂಜಿನಿಯರ್